**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ/ 522 /ಗ್ರಾಪಂಅ/2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 06-05-2014.

**ಇವರಿಂದ:**

**ಸರ್ಕಾರದ ಕಾರ್ಯದರ್ಶಿ,**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
**ಬೆಂಗಳೂರು.**

**ಇವರಿಗೆ:**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
**ಜಿಲ್ಲಾ ಪಂಚಾಯತಿ, ಬೆಳಗಾಂ, ಧಾರವಾಡ, ಯಾದಗಿರಿ, ರಾಯಚೂರು,**
**ಶಿವಮೊಗ್ಗ,** ಈ ಜಿಲ್ಲೆಗಳಿಂದ ಮಾಹಿತಿ ಬರಬೇಕಾಗಿದೆ,

ಮಾನ್ಯರೆ,

**ವಿಷಯ:** ಗ್ರಾಮ ಪಂಚಾಯತಿಗಳು ತೆರಿಗೆಗಳನ್ನು ವಸೂಲಾತಿ ಮಾಡಿರುವ ಮತ್ತು ನೀರಿನ ಕರ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್ಲೋಡ್ ಮಾಡುವಲ್ಲಿ ನಿರ್ಲಕ್ಷ್ಯತೆ ತೋರುತ್ತಿರುವ ಬಗ್ಗೆ.

**ಉಲ್ಲೇಖ:** ಇದೇ ಸಮಸಂಖ್ಯೆಯ ಸರ್ಕಾರದ ಪತ್ರ ದಿನಾಂಕ: 09-04-2014. ಮತ್ತು 25-04-2014.

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖದ ಕಡೆಗೆ ಗಮನ ಸೆಳೆಯಲಾಗಿದೆ.

ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಗ್ರಾಮ ಪಂಚಾಯತಿಗಳು ತೆರಿಗೆ ವಸೂಲಾತಿ ಮಾಡಿರುವ ಮತ್ತು ನೀರಿನ ಕರ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಏಪ್ರಿಲ್ ತಿಂಗಳ 5ನೇ ತಾರೀಖಿನೊಳಗೆ ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯತಿವಾರು ಅಪ್ಲೋಡ್ ಮಾಡುವುದು ಸದರಿ ವಿಷಯವು ಆರ್.ಎಫ್.ಡಿ. ಗುರಿಯಲ್ಲಿ ಸೇರಿಕೊಂಡಿರುತ್ತದೆ. ಆದ್ದರಿಂದ ಇದನ್ನು ಮೊದಲ ಆದ್ಯತೆ ಎಂದು ಪರಿಗಣಿಸುವುದು, **ಆದರೆ ಇದುವರೆವಿಗೂ ತಮ್ಮಿಂದ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಮಾರ್ಚ್ ಅಂತ್ಯದ ಪ್ರಗತಿಯ ವರದಿಯು ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ವಿಳಂಬಕ್ಕೆ ಮತ್ತಷ್ಟು ಅವಕಾಶ ನೀಡದೆ ವೈಯಕ್ತಿಕ ಗಮನ ಹರಿಸಿ, ಎರಡು ದಿನಗಳೊಳಗೆ, ಕೂಡಲೇ ಮಾರ್ಚ್-2014 ಅಂತ್ಯದ ಪ್ರಗತಿ ವರದಿಯನ್ನು ಆಪ್ಲೋಡ್ ಮಾಡುವುದು, ಈ ವಿಷಯವನ್ನು ಮೊದಲ ಆದ್ಯತೆ ಎಂದು ಪರಿಗಣಿಸುವುದು. ಅಲ್ಲದೇ ಇನ್ನೂ ಮುಂದೆ ಪ್ರಗತಿ ವರದಿಗಳನ್ನು ವಿಳಂಬಕ್ಕೆ ಮತ್ತಷ್ಟು ಅವಕಾಶ ನೀಡದೆ ವೈಯಕ್ತಿಕ ಗಮನ ಹರಿಸಿ, ಪ್ರತಿ ತಿಂಗಳು ದಿನಾಂಕ 5 ರೊಳಗೆ ಸರ್ಕಾರಕ್ಕೆ ಕಳುಹಿಸುವುದು ತಪ್ಪಿದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ " ಕಾರಣ ಕೇಳುವ ನೋಟೀಸ್" ನೀಡುವಂತೆ** ತಮಗೆ ತಿಳಿಸುತ್ತಾ, ಸದರಿ ಮಾಹಿತಿಯನ್ನು (ಇಮೇಲ್ ವಿಳಾಸ **sogp2011@gmail.com** ಮತ್ತು ಫ್ಯಾಕ್ಸ್ ಸಂಖ್ಯೆ: **080-22353925** ಮೂಲಕ) ಸರ್ಕಾರಕ್ಕೆ ಕಳುಹಿಸುವಂತೆ ಮತ್ತೊಮ್ಮೆ ತಮ್ಮನ್ನು ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

(ಗಂಗಾರಾಮ್ ಬಡೇರಿಯಾ)
ಸರ್ಕಾರದ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿ:**

1. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.